ಈ ರೀತಿಯ ವಿಭಜನೆಯಿಂದ ಮಾರುಕಟ್ಟೆ ಸಮಿತಿಯಂ ಕಾರ್ಯಚಟುವಟಿಕೆಗಳನ್ನು ಸಂಗಮವಾಗಿ ನಡೆಸಲು ಸಾಧ್ಯವಾಗುತ್ತದೆ.

17 ಮತ್ಸ್ಯಕ್ಷಾಮದಿಂದ ಬೋಟುಗಳ ಮೇಲಣ ಸಾಲದ ಕಂತು ಬಡ್ಡಿ ಬಾಕಿಯಿಂದ ಮಿಾನುಗಾರರಿಗೆ ತೊಂದರೆಯಾಗಿರುವುದು

ಶ್ರೀ ಜಿ. ಎಸ್. ಆಚಾರ್.—ಮತ್ಸ್ಯಕ್ಷಾಮದಿಂದ ಬೋಟುಗಳ ಮೇಲಣಸಾಲದ ಕಂತು, ಬಡ್ಡಿಯ ಬಾಕಿಯಂ ಭಾಧೆಯಿಂದಾಗಿ ಸಾಕಷ್ಟು ಸಂಕಷ್ಟಕ್ಕೀಡಾಗಿದ್ದಾರೆ ಕರಾವಳಿಯ ಮಿಾನುಗಾರರು. ಇದರ ಜೊತೆಯಲ್ಲಿ ವಿದ್ಯುತ್‌ದರ ಏರಿಕೆ ಮತ್ತು ಪವರ್‌ಕಟ್ ಮತ್ತೊನ್ನೇದ್ಯಮವನ್ನೇ ' ಶಟ್ ' ಮಾಡುವ (ಮುಚ್ಚುವ) ಪರಿಸ್ಥಿತಿಗೆ ತರುತ್ತಿದೆ.

ವಿದ್ಯುತ್ ದರ ಆಕಾಶದುದ್ದ ನೆಗೆತ
ಪೂರೈಕೆಯಲ್ಲಿ ಪಾತಾಳಕ್ಕೆ ಕಡಿತ

ಇದರಿಂದಾಗಿ, ಕರ್ನಾಟಕದ ಕರಾವಳಿಯ ಐಸ್ ಕಾರ್ಖಾನೆ (ಐಸ್ ಫ್ಯಾಕ್ಟರಿ) ಮಿಾನು ಕ್ಯಾನಿಂಗಿನ ಉದ್ದಿಮೆಗಳೆಲ್ಲಾ ಒದೆತ. ಈ ಮಿಾನು ಬೇಗ ನಶಿಸುವ ಅತ್ಯಮೂಲ್ಯ ಆಹಾರ ವಸ್ತು ಆದರೂ '' ಕರೆಂಟು ಕನಸಿನ ಗಂಟಾಗಿ '' ಮಿಾನುಗಾರರೆಲ್ಲಿ ಸಂಸ್ಥ ಮಿಾನುಗಾರರ ಒಳಿತಿಗಾಗಿ, ಉದ್ದಿಮೆ ಗಳ ಉಳಿವಿಗಾಗಿ, ಸರಕಾರದಲ್ಲಿ ಮಾನವಿ ಸತತ, ದರದಲ್ಲಿ ಬೇಡ ನೆಗೆತ ಪೂರೈಕೆಯಲ್ಲಿ ಬೇಡ ಕಡಿತ. ವಿದ್ಯುತ್ ಮಂತ್ರಿಗಳು, ಮಿಾನುಗಾರಿಕಾ ಸಚಿವರು ಈ ಸಂಕಷ್ಟ ಮತ್ತು ಸವಲತ್ತು ಒದಗಿಸು ವರೇ ?

ಶ್ರೀ ಎಂ. ರಘುಪತಿ (ಮೀನುಗಾರಿಕಾ ಸಚಿವರು).—

ರಾಜ್ಯದ ಕರಾವಳಿಯಲ್ಲಿ ಕಳೆದ ಮಿಾನುಗಾರಿಕೆ ಋತುವಿನಲ್ಲಿ ಅಂದರೆ ಸೆಪ್ಟಂಬರ್ ೧೯೮೬ ರಿಂದ ಮೇ ೧೯೮೭ರವರೆಗೆ ಮಿಾನು ಹಿಡಿಯುವ ವೃತ್ತಿಯಲ್ಲಿ ಬಹಳ ಅತೃಪ್ತಿ ಸಾಧನೆಯಾಗಿರುವುದರಿಂದ ಬರಗಾಲವು ಉಂಟಾಗಿ ಮಿಾನಗಾರರು ಬಹಳ ಸಂಕಷ್ಟಕ್ಕೆ ಒಳಗಾಗಿದ್ದಾರೆಂದು ತತ್ಪರಿಣಾಮವಾಗಿ ಮಿಾನುಗಾರರು ಬ್ಯಾಂಕಿನ ಸಾಲವನ್ನು ಮರುಪಾವತಿ ಮಾಡಲು ಅಸಮರ್ಥರಾಗಿರುತ್ತಾರೆಂಬುದು ಸಾಮಾನ್ಯ ಅಭಿಪ್ರಾಯ.

೧೯೮೬–೮೭ನೇ ಸಾಲಿನಲ್ಲಿ ಕಡಲ ಮಿಾನು ಉತ್ಪನ್ನವು ೧,೫೧ ೭೭೯ ಮೆ ಟ. ಗಳಾಗಿದ್ದು, ಅದರ ಮೌಲ್ಯವು ರೂ. ೪,೮೫೭.೮೬ ಲಕ್ಷಗಳಾಗಿರುತ್ತೆ. ೧೯೮೧–೮೫ ರಿಂದ ೮೬–೮೭ರ ಅವಧಿಗೆ ಸರಾಸರಿ ವಾರ್ಷಿಕ ಕಡಲ ಮಿಾನು ಉತ್ಪನ್ನವು ೧,೪೫೫,೭೦೪ ಮೆ. ಟನ್ನುಗಳು. ಇದಕ್ಕೆ ಹೋಲಿಸಿದರೆ ೧೯೮೬–೮೭ನೇ ಸಾಲಿನ ಉತ್ಪಾದನೆ ೬೦೭೫ ಮೆ. ಟನ್ನುಗಳಷ್ಟು ಅಧಿಕವಾಗಿರುತ್ತದೆ.

೧೯೭೨–೭೩ ಮತ್ತು ೮೩–೮೪ ರಲ್ಲಿ ಮಿಾನು ಉತ್ಪಾದನೆಯು ಅತಿ ಕಡಿಮೆಯಾಗಿದ್ದು, ಅಂದರೆ ಅನುಕ್ರಮವಾಗಿ ೧,೦೪,೭೬೬ ಮತ್ತು ೧,೨೪,೭೯೦ ಮೆ. ಟನ್ನುಗಳಾಗಿತ್ತು. ಆದರೆ ಸದ್ರಿ ವರ್ಷಗಳಲ್ಲಿ ಮಿಾನಿನ ಕ್ಷಾಮ ಇತ್ತೆಂದು ಘೋಷಿಸಲಾಗಿಲ್ಲ. ೧೯೮೪–೮೫ ಮತ್ತು ೮೫–೮೬ನೇ ಸಾಲಿನ ಮಿಾನು ಉತ್ಪಾದನೆ ಅನುಕ್ರಮವಾಗಿ ೧,೬೮,೨೪೬ ಮತ್ತು ೨,೮೦ ೬೬೬ ಮೆ. ಟನ್ನುಗಳಿತ್ತು. ಈ ವರ್ಷ ಗಳಿಗೆ ಹೋಲಿಸಿದಾಗ ೮೬–೮೭ನೇ ಸಾಲಿನ ಮಿಾನು ಉತ್ಪಾದನೆಯು ಕಡಿಮೆ ಇತ್ತು. ಇಂತಹ ಏರಿಳಿತ ಗಳು ಕಡಲ ಮಿಾನುಗಾರಿಕೆಯಲ್ಲಿ ಸ್ವಾಭಾವಿಕ ೧೯೮೬–೮೭ರಲ್ಲಿ ಭೂತಾಯಿ ಮಿಾನಿನ ಉತ್ಪಾದನೆಯಲ್ಲಿ ಗಣನೀಯ ಪ್ರಮಾಣದ -ಕಡಿತ ಉಂಟಾಗಿತ್ತು. ಈ ಮಿಾನು ರಾಜ್ಯದ ಕರಾವಳಿಯಲ್ಲಿ ಪ್ರಮುಖವಾಗಿರು ವುದರಿಂದ ಈ ಪರಿಸ್ಥಿತಿ ಉಂಟಾಗಿದೆ. ಆದರೆ ಬಂಗುಡೆ, ಶಾಜೆಮಾಸ ಮತ್ತು ಶೀಗಡಿ ಮುಂತಾದ ಮಿಾನುಗಳ ಉತ್ಪಾದನೆ ಸಮಾಧಾನಕರವಾಗಿತ್ತು. ಮಿಾನಿಗೆ ಒಳ್ಳೆಯ ಧಾರಣೆಯೂ ಲಭಿಸಿದೆ.

ಕರಾವಳಿಯಲ್ಲಿ ನಾಡ ದೋಣಿಗಳು ವಿವಿಧ ತರಹ ಯಾಂತ್ರಿಕ ದೋಣಿಗಳು ನಾನಾ ರೀತಿಯ ಬಲೆಗಳನ್ನೊಳಗೊಂಡು ಮಿಾನುಗಾರಿಕೆಯಲ್ಲಿ ತೊಡಗಿವೆ, ಈ ಎಲ್ಲ ವಿಧದ ಮಿಾನುಗಾರಿಕೆಗೆ ಉತ್ಪನ್ನ ದಲ್ಲಿ ಸಮಾನತೆ ಇರುವುದಿಲ್ಲ.

೧೯೮೬-೮೭ ರಲ್ಲಿ ಮಾನಿನ ಬರಗಾಲ ಪರಿಸ್ಥಿತಿ ಇತ್ತೊ ಇಲ್ಲವೋ ಎಂಬುದನ್ನು, ನಿರ್ಧರಿಸಲು ಮತ್ತು ಸೂಕ್ತ ಶಿಫಾರಸ್ಸುಗಳನ್ನು ನೀಡಲು ಪ್ರೊ. ಎಚ್. ಪಿ. ಸಿ. ಶೆಟ್ಟಿ, ಮಂಗಳೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರು ಇವರ ಏಕ ಸದಸ್ಯ ಸಮಿತಿಯನ್ನು ಸರ್ಕಾರವು ನೇಮಿಸಿದೆ ಮತ್ತು ಅವರ ವರದಿಯನ್ನು ಕಾಯುತ್ತಿದೆ.

ಹೇಳಿಕೆಯು ಉಳಿದ ಭಾಗ ವಿದ್ಯುಚ್ಛಕ್ತಿ ಕಡಿತ ಹಾಗೂ ದರ ಏರಿಕೆಗೆ ಸಂಬಂಧಪಟ್ಟಿರುತ್ತದೆ. ವಿಮಾನ ಅತಿ ಶೀಘ್ರ ಕೆಡುವ ವಸ್ತು. ವಿಮಾನದ ದಾಸ್ತಾನು ಮತ್ತು ಸಂರಕ್ಷಣೆಗೋಸ್ಕರ ವಿಮಾನುಗಾರಿಕೆಗೆ ಸಂಬಂಧಪಟ್ಟ ಮಂಜುಗಡ್ಡೆ ಮತ್ತು ಇತರ ಸಂಸ್ಕರಣ ಘಟಕಗಳಿಗೆ ನಿರಂತರ ವಿದ್ಯುಚ್ಛಕ್ತಿ ಸರಬರಾಜು ಅತಿ ಅವಶ್ಯಕ.

ಈ ವಿಷಯವಾಗಿ ನನ್ನ ಸಹೋದ್ಯೋಗಿಗಳ ಜೊತೆಯಲ್ಲಿ ಚರ್ಚೆಮಾಡಿ ಸೂಕ್ತ ಪರಿಹಾರವನ್ನು ಒದಗಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂದು ಈ ಸದನದಲ್ಲಿ ಹೇಳುತ್ತಿದೆ ನೆ.

18 ಸೇಡಂ ತಾಲ್ಲೂಕಿನ ಹಾಬಾಳಟ್ಟಿ ಗ್ರಾಮದ ನ್ಯಾಯಬೆಲೆ ಆಹಾರದ ವಿತರಣೆಯಲ್ಲಿ ಅವ್ಯವಹಾರ ನಡೆದಿರುವುದರ ಬಗ್ಗೆ

ಶ್ರೀ ವೀರಕಯ್ಯ ವಿ. ಗುತ್ತೇದಾರ್.—ಸನ್ಮಾನ್ಯ ಸಭಾಧ್ಯಕ್ಷರೇ ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಹಾಬಾಳಟ್ಟಿಗ್ರಾಮದ ನ್ಯಾಯಬೆಲೆ ಆಹಾರ ವಿತರಣೆಯಲ್ಲಿ ನಡೆದ ಅವ್ಯವಹಾರ ನಡೆದಿದ್ದು ಸಾಬೀತಾಗಿದ್ದು ಈ ಬಗ್ಗೆ ಜಿಲ್ಲಾಧಿಕಾರಿಗಳು ಈ ವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ವಿಚಾರಿಸಲಾಗಿ ಜಿಲ್ಲಾಧಿಕಾರಿಗಳು ನಿರ್ದೇಶಕರು ಆಹಾರ ಇಲಾಖೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ಈ ವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಕಾರಣ ಅಗತ್ಯ ವಸ್ತು, ಕಾನೂನು ಪ್ರಕಾರ ಕ್ರಮ ಕೈಕೊಳ್ಳಲು ಪೋಲೀಸ್ ಇಲಾಖೆ ಆದೇಶ ನೀಡಬೇಕೆಂದು ಈ ಮೂಲಕ ತಿಳಿಯಪಡಿಸುತ್ತೇನೆ ಹಾಗೂ ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಸಭಾಧ್ಯಕ್ಷರೇ, ಕಲ್ಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಹಾಬಾಳಟ್ಟಿ ಗ್ರಾಮದಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ ಇವರು ನ್ಯಾಯ ಬೆಲೆ ಅಂಗಡಿಯನ್ನು ನಡೆಸುತ್ತಿದ್ದರು. ಐದಾರು ತಿಂಗಳುಗಳ ಹಿಂದೆ ಈ ನ್ಯಾಯಬೆಲೆ ಅಂಗಡಿಯ ಕಾರ್ಡಾದಾರರಿಂದ ಹಂಚಿಕೆಗಾಗಿ ನೀಡಿರುವ ಆಹಾರಧಾನ್ಯಗಳು ಸರಿಯಾಗಿ ವಿತರಣೆಯಾಗದೆ ದುರುಪಯೋಗವಾಗುತ್ತಿದೆಯೆಂಬ ದೂರು ಸೇಡಂ ತಹಸೀಲ್ದಾರರಿಗೂ, ಉಪವಿಭಾಗಾಧಿಕಾರಿಗಳಿಗೂ ಒಂದಿರುತ್ತದೆ. ಸೇಡಂ ತಹಸೀಲ್ದಾರರು ಸದರಿ ನ್ಯಾಯಬೆಲೆ ಅಂಗಡಿಯಲ್ಲಿ ನಡೆಯುತ್ತೆನ್ನಲಾದ ಅವ್ಯವಹಾರದ ಬಗ್ಗೆ ಪ್ರಾರಂಭಿಕ ತನಿಖೆ ನಡೆಸಿ, ಸೇಡಂ ಉಪ ವಿಭಾಗಾಧಿಕಾರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ವರದಿ ಸಲ್ಲಿಸಿದರು. ಸೇಡಂ ಉಪ ವಿಭಾಗಾಧಿಕಾರಿಗಳೂ ಸಹ ಈ ವಿಚಾರವಾಗಿ ತನಿಖೆ ಮಾಡಿ ತನಿಖೆ ನಡೆಸುವ ಸಮಯದಲ್ಲಿ ಸಾಕ್ಷಿದಾರರು ಲೆಕ್ಕ ಪುಸ್ತಕಗಳನ್ನು ಕೊಡದೆ ಇರುವ ಕಾರಣ, ದುರುಪಯೋಗದ ವಿಚಾರ ತಿಳಿದುಬಂದು, ಮುಂದಿನ ಆದೇಶದವರೆಗೆ ಆ ನ್ಯಾಯ ಬೆಲೆ ಅಂಗಡಿಗೆ ಆಹಾರ ಧಾನ್ಯಗಳ ಮಾರು ಹಂಚಿಕೆಯನ್ನು ನಿಲ್ಲಿಸಿದ್ದಾರೆ ಮತ್ತು ಕಾರ್ಡುದಾರರನ್ನು ಹತ್ತಿರದ ನ್ಯಾಯಬೆಲೆ ಅಂಗಡಿಗಳಿಗೆ ಲಗತ್ತಿಸಲು ಆದೇಶಿಸಿದ್ದಾರೆ.

ಆಗತ್ಯ ವಸ್ತುಗಳ ಕಾಯಿದೆ ಪ್ರಕಾರ ತಹಸೀಲ್ದಾರರು ಇಂತಹ ವಿಚಾರಗಳಿಗೆ ಅಧಿಕಾರದತ್ತವಾದ ಅಧಿಕಾರಿ ಜಿಲ್ಲಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ವರದಿ ಮಾಡಬೇಕು ಗುಲ್ಬರ್ಗ ಜಿಲ್ಲೆಯಲ್ಲಿ ಈ ಅಧಿಕಾರವನ್ನು ಜಿಲ್ಲಾಧಿಕಾರಿಯವರು ಉಪವಿಭಾಗಾಧಿಕಾರಿಯವರಿಗೆ ನೀಡಿರುವುದರಿಂದ, ಅವರು ಎಲ್ಲಾ ರೀತಿಯಲ್ಲೂ ಸೂಕ್ತ ಮುಂದಿನ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಹೊಂದಿರುತ್ತಾರೆ ಉಪ ವಿಭಾಗಾಧಿಕಾರಿಯವರು ಈ ವಿಚಾರವಾಗಿ ಮುಂದಿನ ತನಿಖೆಯನ್ನು ನಡೆಸುತ್ತಿರುವರು ವಿಚಾರಣೆಯ ನಂತರ ತಪ್ಪಿ ತಸ್ಥರ ಮೇಲೆ ಕಾನೂನು ಅನುಸರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.